ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಲಿಂಗದಹಳ್ಳಿಯ ಚೇತನ್ ಕುಮಾರ್ ಕವಿ, ಕಥೆಗಾರ. ಕನ್ನಡಪರ ಹೋರಾಟಗಾರರು. 'ಸ್ಪರ್ಧಾ ಗೈಡ್' ಮಾಸಿಕ ಪತ್ರಿಕೆಯ ಸಂಪಾದಕ. ಬರವಣಿಗೆ ಅವರ ನಿತ್ಯಕಾಯಕ. 'ಮೈ ಮೇಲಿನ ಮುಳ್ಳುಗಳು' ಪ್ರಕಟಿತ ಕವನ ಸಂಕಲನ.

ಬಂದ ಮಹಾದೇವ, ಕೇವಲ ಕೆಲವೇ ವರ್ಷಗಳಲ್ಲಿ ಹಾಲಿ ಎಂ.ಎಲ್.ಎ ಶಂಕರಪ್ಪನವರು ಸೇರಿದಂತೆ, ಮಾಜಿ ಶಾಸಕರು, ಎಂಪಿಗಳು ಮಹಾದೇವರನ್ನು 'ರಾಜಕೀಯ ಧುರೀಣರೇ' ಎಂದು ಕರೆಯುವವರೆಗೆ ಸ್ಥಳೀಯ ರಾಜಕೀಯದಲ್ಲಿ ಮಹಾದೇವ ಪ್ರಾಮುಖ್ಯತೆಯನ್ನು ಗಳಿಸಿದ್ದರು.

**ಎರಡು**

ಹೀಗಿರುವಾಗ, ಈಗಾಗಲೇ ಆ ತಾಲ್ಲೂಕಿನಲ್ಲಿ ಎರಡು ಬಾರಿ ಗೆದ್ದು ತಾಲ್ಲೂಕಿನ ಹಾಲಿ ಶಾಸಕರಾಗಿದ್ದ ಶಂಕರಪ್ಪನವರು ಹೃದಯಾಘಾತವಾಗಿ ಮರಣ ಹೊಂದಿದರು. ಅವರಿಗಾಗ ಎಪ್ಪತ್ತು ವರ್ಷ ವಯಸ್ಸಾಗಿತ್ತು. ಅವರು ಅಧಿಕಾರ ವಹಿಸಿಕೊಂಡು ಬರೀ ಒಂದು ವರ್ಷವಷ್ಟೇ ಕಳೆದಿತ್ತು. ನಾಡಿನಲ್ಲಿ ಇರುವವರಲ್ಲಿಯೇ ಉತ್ತಮ ಶಾಸಕರೆಂದು ಹೆಸರು ವಾಸಿಯಾದ ಶಂಕರಪ್ಪನವರ ನಿಧನದಿಂದ ಆ ಪಕ್ಷಕ್ಕೆ ತುಂಬಲಾರದ ನಷ್ಟವಾಗಿತ್ತು.

ಶಾಸಕ ಶಂಕರಪ್ಪನವರು ಮರಣ ಹೊಂದಲಾಗಿ ತೆರವಾದ ಶಾಸಕ ಸ್ಥಾನದ ಮರು ಆಯ್ಕೆಗಾಗಿ, ಆ ತಾಲ್ಲೂಕು ಮರುಚುನಾವಣೆಯನ್ನು ಎದುರಿಸ ಬೇಕಾಯಿತು. ಜಾತ್ಯತೀತ ಮನೋಭಾವದಿಂದ ತಾಲೂಕಿನ ಜನರ ಹೃದಯವನ್ನು ಗೆದ್ದು ಹೆಸರು ವಾಸಿಯಾದ ಶಂಕರಪ್ಪನವರ ಸ್ಥಾನವನ್ನು ತುಂಬಿ ಮುಂಬರುವ ಎಲೆಕ್ಷನ್‌ನಲ್ಲಿ ನಮ್ಮ ಪಕ್ಷ ಹೇಗೆ ಗೆಲ್ಲುವುದೆಂದು, ಅಂತಹ ಒಬ್ಬ ಅಭ್ಯರ್ಥಿಯ ಶೋಧದಲ್ಲಿ ಆ ಪಕ್ಷವು ತೊಡಗಿತ್ತು. 'ಬೇಕಾದರೆ ಪಾರ್ಟಿ ಫಂಡ್ ಕೊಟ್ಟು ನಮಗೆ ನಿಮ್ಮ ಪಕ್ಷದ ಅಭ್ಯರ್ಥಿಯಾಗಲು ಅವಕಾಶ ಕೊಡಿ' ಎಂದು ಕೇಳಿ ಕೊಂಡವರ ಒಂದು ದಂಡೇ ಇತ್ತು. ಆದರೆ ಅವರ ರಾಜಕೀಯ ಹಿನ್ನೆಲೆಗಳು ಉತ್ತಮವಾಗಿಲ್ಲದಿದ್ದರಿಂದ, ಜೊತೆಗೆ ಅವರು ಗೆಲ್ಲುವುದು ಕಷ್ಟವೇ ಆಗಿದ್ದರಿಂದ, ಅವರನ್ನು ಆ ಪಕ್ಷವು ಆಯ್ಕೆಯಿಂದ ದೂರವಿಟ್ಟಿತ್ತು. ಕಾರಣ, ಪಕ್ಷಕ್ಕೆ ಹಣದ ಅಗತ್ಯ ಹೇಗೋ ಹಾಗೆ ಗೆಲ್ಲುವ ಪ್ರತಿಷ್ಠೆ ಮತ್ತು ಉತ್ತಮ ಅಭ್ಯರ್ಥಿಯ ಅತ್ಯಗತ್ಯವಿತ್ತು. ಹಾಗಾಗಿ ಚುನಾವಣಾ ಕಣಕ್ಕೆ ಗೆಲ್ಲುವ ಉತ್ತಮ ಅಭ್ಯರ್ಥಿಯನ್ನೇ ಇಳಿಸಬೇಕೆಂದು ಆ ಪಕ್ಷವು ನಿರ್ಧರಿಸಿತ್ತು. ಸ್ಥಳೀಯವಾಗಿ ಸೋಸಿ, ಕುದಿಸಿ, ಭಟ್ಟಿ ಇಳಿಸಿದರೂ ಉತ್ತಮ ರಾಜಕೀಯ ಹಿನ್ನೆಲೆ ಇರುವ ಅಭ್ಯರ್ಥಿಯನ್ನು ಆರಿಸುವಲ್ಲಿ ಆ ಪಕ್ಷವು ಸೋತಿತ್ತು. ಹೊರ ತಾಲ್ಲೂಕಿನ ಅಥವಾ ಹೊರ ಜಿಲ್ಲೆಯ ಯಾವುದಾದರೂ ಗೆಲ್ಲುವ ಅಭ್ಯರ್ಥಿಯನ್ನು ತಾಲ್ಲೂಕಿನಲ್ಲಿ ತಂದು ನಿಲ್ಲಿಸಿ ಗೆಲ್ಲಿಸುವ ಪಕ್ಷದ ನಿರ್ಧಾರವು, ಹಲವು ಮೀಟಿಂಗ್‌ಗಳ ನಂತರ, 'ಈ ನಿರ್ಧಾರವನ್ನು ತಾಲ್ಲೂಕಿನ ಜನ ಒಮ್ಮತವಾಗಿ ಒಪ್ಪುವರೋ ಇಲ್ಲವೋ' ಎಂಬ ಡೋಲಾಯಮಾನ ತೀರ್ಮಾನದೊಂದಿಗೆ ಆ ನಿರ್ಧಾರವನ್ನು ಪಕ್ಷವೂ ಕೈ ಬಿಟ್ಟಿತು. ಎದುರಾಳಿ ಪಕ್ಷಗಳು ಈ ಸುವರ್ಣಾವಕಾಶವನ್ನು ಕೈಬಿಟ್ಟರೆ ಇನ್ನೆಂದೂ ನಾವು ಇಲ್ಲಿ ಗೆಲ್ಲಲಾಗುವುದಿಲ್ಲ ಎಂಬ ಅರಿವುಳ್ಳವಾಗಿ, ಇರುವ ತಮ್ಮ ಪಕ್ಷದ ಅಭ್ಯರ್ಥಿಗಳಿಗೆ ಒಂದಷ್ಟು ಸುಣ್ಣ-ಬಣ್ಣ ಕಟ್ಟಿ ಅವರೇ ಇಂದ್ರ- ಚಂದ್ರ ಎಂದು ಹೊಗಳುತ್ತಾ, 'ನಮ್ಮ ಪಕ್ಷದ ಅಭ್ಯರ್ಥಿಗೂ ಒಂದು ಅವಕಾಶ ಕೊಡಿ' ಎಂದು, ಅವರನ್ನು ಗೆಲ್ಲಿಸಲು ನೂರಾರು ತಂತ್ರ- ಕುತಂತ್ರಗಳನ್ನು ಆಗಲೇ ಚಾಲ್ತಿಗೆ ತಂದಿದ್ದವು.

ತಮ್ಮ ಪಕ್ಷಕ್ಕೆ ಎಂ.ಎಲ್.ಎ ಅಭ್ಯರ್ಥಿಯ ಆಯ್ಕೆಯೇ ದೊಡ್ಡ ಸವಾಲ್ ಆಗಿರುವುದನ್ನು ಮೈನಸ್ ಪಾಯಿಂಟಾಗಿ ಮಾಡಿಕೊಂಡ ವಿರೋಧ ಪಕ್ಷಗಳ ಎದುರು, ನಾವು ಪ್ಲಸ್ ಪಾಯಿಂಟ್ ಆಗುವುದು ಹೇಗೆ? ಎಂದು ಚಿಂತಿಸುತ್ತ ಹೋದ ಪಕ್ಷದ ಮುಖಂಡರಿಗೆ, ಆ ಪಕ್ಷ ಈ ಚುನಾವಣೆಯಲ್ಲಿ ಗೆದ್ದೇ ಗೆಲ್ಲುವ ಅಭ್ಯರ್ಥಿಯಾಗಿ ಕಂಡವರು ಬೆಂಕಿ ಮಹಾದೇವ. ತಕ್ಷಣವೇ ಕಾರ್ಯಗತರಾದ ಪಕ್ಷದ ಹೈಕಮಾಂಡ್ ಮಹಾದೇವರಿಗೆ ಫೋನ್ ಕರೆ ಮಾಡಿದರು.